1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ. ಸಂಖ್ಯೆ:1793/2018

ಫಿರ್ಯಾದಿ : **ಬಿಳಿಗೆರೆ ಪೊಲೀಸ್ ಠಾಣೆ**

ವಿರುದ್ಧ

ಆರೋಪಿ: ರಾಜರತ್ನಂ, ಬಿನ್ ಲೇಟ್ ವಿಜಯಕುಮಾರ, 45 ವರ್ಷ,
ವಾಸ:ಕಿರುಗುಂದ ಗ್ರಾಮ, ನಂಜನಗೂಡು ತಾಲ್ಲೂಕು

: ಆಪಾದನೆ :

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ನಂಜನಗೂಡು ತಾಲ್ಲೂಕು, ಕಿರುಗುಂದ ಗ್ರಾಮದ ಬಳಿ ಕಿರುಗುಂದ ಗ್ರಾಮದ ವಾಸಿಯಾದ 1ನೇ ಆರೋಪಿತರಾದ ನೀವು ನಿಮಗೆ ಸೇರಿದ ಸರ್ವೆ ಸಂ:177 ರಲ್ಲಿ 3 ಎಕರೆ 17 ಗುಂಟೆ ಜಮೀನು ಹೊಂದಿದ್ದು, ಸದರಿ ಜಮೀನಿನಲ್ಲಿ ಹಸುಗಳನ್ನು ಸಾಕಲು ಷೆಡ್ ಇದ್ದು, ಹಸುಗಳನ್ನು ಮಾರಿದ ನಂತರ ಷೆಡ್ ಖಾಲಿ ಇದ್ದು, ಅದನ್ನು ಗೊಬ್ಬರಗಳ ದಾಸ್ತಾನು ಮಾಡಿಕೊಳ್ಳಲು ತಮಿಳುನಾಡು ಮೂಲದ 3ನೇ ಆರೋಪಿತರಾದ ಕಾರ್ತಿಕ್ ಎಂಬುವವರಿಗೆ 2ನೇ ಆರೋಪಿತರ ಮೂಲಕ ಷೆಡ್ಡನ್ನು ಬಾಡಿಗೆಗೆ ನೀಡಿದ್ದು, ಸದರಿ ಷೆಡ್ಡನಲ್ಲಿ ಅಕ್ರಮವಾಗಿ ನಕಲಿ ರಸ ಗೊಬ್ಬರಗಳನ್ನು ದಾಸ್ತಾನು ಮಾಡಿದ್ದು, ಸದರಿ ಷೆಡ್ಡಿನ ಮಾಲೀಕರಾದ ನೀವು ಅಕ್ರಮವಾಗಿ ನಕಲಿ ರಸ ಗೊಬ್ಬರಗಳನ್ನು ದಾಸ್ತಾನು ಮಾಡಲು 3ನೇ ಆರೋಪಿಗೆ ಅವಕಾಶ ನೀಡಿದ್ದು , ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಲೈಸೆನ್ಸ ಪಡೆಯದ 3ನೇ ಆರೋಪಿಗೆ ಬಾಡಿಗೆಗೆ ನೀಡಿರುತ್ತೀರಿ. ಆದ್ದರಿಂದ, ರಸಗೊಬ್ಬರ ನಿಯಂತ್ರಣ ಆದೇಶ 1985ರ ಕಲಂ.19(ಎ)(ಸಿ) ಮತ್ತು ಅಗತ್ಯ ವಸ್ತುಗಳ ಕಾಯ್ದೆ 1955 ರ ಕಲಂ.3 ಮತ್ತು 7, 120(ಬಿ), 420 ಸಹವಾಚಕ ಕಲಂ.34 ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.

ಪ್ರಶ್ನೆ-1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಆರೋಪಿ ಉತ್ತರಃ

ಪ್ರಶ್ನೆ-2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ17.12.2025

1 ನೇ ಹೆ .ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು.